# ಮೂಲಹಸ್ತ ಪ್ರತಿಗಳಲ್ಲಿಲ್ಲದ ಹೊಸ ಒಡಂಬಡಿಕೆಯ ವಾಕ್ಯ ಭಾಗಗಳು

## ಪ್ರೋ. ಟಿಶೆಂಡಾರ್ಫ್‌ರವರು ಎರಡು ಪುರಾತನ ಗ್ರೀಕ್ ಹಸ್ತ ಪ್ರತಿಗಳಾದ ಸಿನಾಯ್‌ಟಿಕ್ ಮತ್ತು ವ್ಯಾಟಿಕನ್ ನಂ. 1209 ಗಳನ್ನು ಓದಿ ಬರೆದಂತಹ ಟಿಪ್ಪಣಿಯ ಆಧಾರದ ಮೇಲೆ ಈ ಪಟ್ಟಿ ಮಾಡಲ್ಪಟ್ಟಿದೆ.

ನಮ್ಮ ಸಾಮಾನ್ಯ ಅನುವಾದಗಳಲ್ಲಿ (ಕಿಂಗ್ ಜೇಮ್ಸ್ ಅನುವಾದದಲ್ಲಿ) ಕಂಡುಬರುವಂತ ಈ ಕೆಳಗಿನ ವಾಕ್ಯಗಳು ಪುರಾತನ ಹಸ್ತಪ್ರತಿಗಳಲ್ಲಿ ಕಂಡು ಬರುವುದಿಲ್ಲ, ಮತ್ತು ಅವು ನಿಶ್ಚಯವಾಗಿಯೂ ದೈವೀಕ ವಾಕ್ಯಗಳ ಭಾಗವಲ್ಲ. ಪ್ರತಿಯೊಬ್ಬ ಬೆರಿಯನೂ ಕೂಡ ತನ್ನ ಕೈಯಲ್ಲಿ ಪೆನ್ಸಿಲ್ ಹಿಡಿದು ಸತ್ಯವೇದವನ್ನು ಪರಿಶೀಲಿಸಿ ಈ ವಾಕ್ಯಗಳನ್ನು ಹೊಡೆದುಹಾಕಿ ನಂತರ ಆ ಭಾಗಗಳನ್ನು ಓದಿ ಸುಧಾರಣೆಯನ್ನು ಗಮನಿಸಲಿ. ಈ ದಿನದವರೆಗೂ ಹುಡುಕಿರುವ ಮೂಲ ಹಸ್ತಪ್ರತಿಗಳಲ್ಲಿ ಇಲ್ಲದಿರುವ ಎಲ್ಲಾ ಪ್ರಮುಖವಾದ ವಾಕ್ಯಗಳನ್ನು ಈ ಪಟ್ಟಿ ಒಳಗೊಂಡಿದೆ.

ಸಂಗ್ರಹಕಾರನು ಈ ಪಟ್ಟಿಯನ್ನು ಕಾಲಕಾಲಕ್ಕೆ ಸಂಕ್ಷೇಪಿಸುತ್ತಾ ಬಂದಿದ್ದಾನೆ ಈಗ ಯಾವ ಸ್ಥಿತಿಗೆ ತಂದಿದ್ದಾರೋ ಅದು ಟಿಶೆಂಡಾರ್ಫ್‌ರವರ ಕೆಲಸದಲ್ಲಿ ನಮಗೆ ಏನೆಲ್ಲಾ ಉಪಯುಕ್ತವಾಗಿದೆಯೋ ಅವೆಲ್ಲವುಗಳನ್ನು ಅದು ಪ್ರತಿನಿಧಿಸುತ್ತದೆ. ಈ ಪಟ್ಟಿಯಲ್ಲಿರುವ ಎಲ್ಲವನ್ನೂ ನಮ್ಮ ಸತ್ಯವೇದಗಳಿಂದ ಏಕೆ ಹೊಡೆದು ಹಾಕಿಬಿಡಬೇಕು ಎಂಬುದಕ್ಕೆ ಸಂಗ್ರಹಕಾರನ ದೃಷ್ಟಿಕೋನದಿಂದ ಬಹಳ ಒಳ್ಳೆಯ ಕಾರಣಗಳು ಇರುತ್ತವೆ. ಹೇಗೆ ಮೂಲಹಸ್ತ ಪ್ರತಿಯಲ್ಲಿ ಇರದ ವಾಕ್ಯಗಳನ್ನು ಮಾರ್ಕ 14:30, 68, 72 ರಿಂದ ತೆಗೆದುಹಾಕುವುದಾದರೆ ಅಲ್ಲಿನ ವಿವರಣೆಗಳು ಬೇರೆ ಸುವಾರ್ತಿಕರು ನೀಡಿರುವ ವಿವರಣೆಗಳೊಂದಿಗೆ ನಿಖರವಾಗಿ ಹೊಂದಾಣಿಕೆಯಾಗುತ್ತದೆ. ಅಥವಾ ಲೂಕ 23:34 ಇತಿಹಾಸವು ಯೆಹೂದ್ಯರು ತಮ್ಮ ಪಾಪಗಳಿಗೆ ದಂಡನೆಯನ್ನು ಖಡ್ಡಾಯವಾಗಿ ಅನುಭವಿಸುವಂತೆ ಮಾಡಲ್ಪಟ್ಟರು ಎಂಬುದನ್ನು ತೋರಿಸುತ್ತದೆ; ಅಥವಾ ಯೋಹಾನ 4:9 ನ್ನು ತೆಗೆದುಕೊಳ್ಳಿ ಅದು ಲೂಕ 9:52 ರೊಂದಿಗೆ ಹೊಂದಾಣಿಕೆಯಾಗುವುದಿಲ್ಲ; ಆ ವಾಕ್ಯವು ನಮಗೆ ಕರ್ತನು ತಾನೇ ಸಮಾರ್ಯದವರೊಂದಿಗೆ ವ್ಯವಹರಿಸುತ್ತಿದ್ದನು ಎಂಬುದನ್ನು ತೋರಿಸುತ್ತದೆ. ಹಿಂದಿನ ನಕಲುಗಾರರು ಸೇರಿಸುವಂತ ಮೂಲ ಹಸ್ತ ಪ್ರತಿಗಳಲ್ಲಿಲ್ಲದ ಹತ್ತಾರು ವಾಕ್ಯಗಳನ್ನು ಎಲ್ಲಾ ನಿರೂಪಣೆಗಳು ಏಕ ರೀತಿಯಲ್ಲಿರಬೇಕೆಂಬ ಉದ್ದೇಶದಿಂದ ಮತ್ತು ನಮ್ಮ ವಿವೇಚನೆಯ ಪ್ರಕಾರ ಅವುಗಳ ಸೇರ್ಪಡೆಯಿಂದಾಗಿ ಸಂದೇಶದ ಪಾವಿತ್ರತೆಯ ಮೇಲೆ ಪರಿಣಾಮ ಬೀರದ ನೂರಾರು ಅನುಪಯುಕ್ತ ಪದಗಳನ್ನು ಈ ಪಟ್ಟಿಯಿಂದ ನಾವು ಬಿಟ್ಟುಬಿಟ್ಟದ್ದೇವೆ. ಇದರಲ್ಲಿನ ಕೆಲವು ಭಾಗಗಳನ್ನು ಈಗಾಗಲೇ ಇತ್ತೀಚಿನ ಅನುವಾದಗಳಲ್ಲಿ ಅಂದರೆ ನ್ಯೂ ಅಮೆರಿಕನ್ ಸ್ಟಾಂಡರ್ಡ್ ಅಥವಾ ನ್ಯೂ ಇಂಟರ್‌ನ್ಯಾಷನಲ್ ವರ್ಷನ್‌ಗಳಲ್ಲಿ ತೆಗೆದುಹಾಕಿದ್ದಾರೆ. ಏಕೆಂದರೆ ಅವು ಹೆಚ್ಚು ವಿಶ್ವಾಸಾರ್ಹ ಪುರಾತನ ಹಸ್ತಪ್ರತಿಗಳಿಂದ ಭಾಷಾಂತರಿಸಲ್ಪಟ್ಟಿವೆ. ಅಥವಾ * ಚಿನ್ಹೆ ಹೊಂದಿರುವಂಥದ್ದು ಸಿನಾಯ್‌ಟಿಕ್ ಹಸ್ತ ಪ್ರತಿಗಳಲ್ಲಿ ಕಂಡುಬರುವುದಿಲ್ಲ. ತಿಮೋತಿಯನಿಗೆ ಬರೆದ ಪತ್ರಿಕೆ, ಇಬ್ರಿಯ ಪುಸ್ತಕದ ಕಡೆ ಭಾಗಗಳು ಹಾಗೂ ಪ್ರಕಟಣಾ ಪುಸ್ತಕ ಸಂಪೂರ್ಣವಾಗಿ ವ್ಯಾಟಿಕನ್ ಹಸ್ತಪ್ರತಿ ಸಂ. 1209 ರಲ್ಲಿ ಕಾಣೆಯಾಗಿದೆ. ಅದನ್ನು ಬರೆದ ಹದಿನೈದು ಅಥವಾ ಅದಕ್ಕಿಂತ ಹೆಚ್ಚು ಶತಮಾನದ ಅನಂತರದಲ್ಲಿ ಅವು ಕಳೆದುಹೋಗಿವೆ. ಆದರೆ ಸಿನಾಯ್‌ಟಿಕ್ ಹಸ್ತಪ್ರತಿಗಳು ಸತ್ಯವೇದದ ಬಹಳ ಪುರಾತನವಾದ ಹಸ್ತ ಪ್ರತಿಯಾಗಿದ್ದು ಅದು ಕ್ರಿ.ಶ. 331 ರಲ್ಲಿ ಬರೆಯಲ್ಪಟ್ಟಿರುತ್ತದೆ ಮತ್ತು ಅದು ದೋಷರಹಿತವಾಗಿಯೂ ಹಾಗೂ ಪೂರ್ಣವಾಗಿಯೂ ಇದೆ.

| Sl No. | Book | Chapter | Verse |
|---|---|---|---|
| 1 | ಮತ್ತಾಯ | 6:25 | ಈ ಕಾರಣದಿಂದ ನಮ್ಮ ಪ್ರಾಣಾಧಾರಣೆಗೆ ಏನು ಊಟ ಮಾಡಬೇಕು, ~~ಏನು ಕುಡಿಯಬೇಕು,~~ ನಮ್ಮ ದೇಹರಕ್ಷಣೆಗೆ ಏನು ಹೊದ್ದುಕೊಳ್ಳಬೇಕು... |
| 2 | ಮತ್ತಾಯ | 16:2,3 | ಪೂರ್ತಿ ವಚನ |
| 3 | ಮತ್ತಾಯ | 23:35 | ಹೀಗೆ ನೀತಿವಂತನಾದ ಹೇಬೆಲನ ರಕ್ತವು ಮೊದಲುಗೊಂಡು ನೀವು ದೇವಾಲಯಕ್ಕೂ ಯಜ್ಞವೇದಿಗೂ ನಡುವೆ ಕೊಂದು ಹಾಕಿದ ~~ಬರಕೀಯನ ಮಗನಾದ~~ ಜಕರೀಯನ ರಕ್ತದವರೆಗೂ ಭೂಮಿಯ ಮೇಲೆ ಸುರಿಸಲ್ಪಟ್ಟ ... |
| 4 | ಮತ್ತಾಯ | 24:10 | ಆಗ ಅನೇಕರು ಹಿಂಜರಿದು ಒಬ್ಬರನ್ನೊಬ್ಬರು ಹಿಡುಕೊಡುವರು; ~~ಒಬ್ಬರಮೇಲೊಬ್ಬರು ದ್ವೇಷ ಮಾಡುವರು~~. |
| 5 | ಮತ್ತಾಯ | 24:41 | ಇಬ್ಬರು ~~ಹೆಂಗಸರು~~ ಬೀಸುವ ಕಲ್ಲಿನ ಮುಂದೆ ಕೂತು ಬೀಸುತ್ತಿರುವರು; ಒಬ್ಬ~~ಳು~~(ರು) ತೆಗೆದುಕೊಳ್ಳಲ್ಪಡುವ~~ಳು~~(ರು), ಒಬ್ಬಳು ಬಿಡಲ್ಪಡುವ~~ಳು~~(ರು). |
| 6 | ಮತ್ತಾಯ | 27:52 | ಭೂಮಿಯು ಅದುರಿತು; ಬಂಡೆಗಳು ಸೀಳಿಹೋದವು; ~~ಸಮಾಧಿಗಳು ತೆರೆದವು;~~ ನಿದ್ದೆಹೋಗಿದ್ದ ಅನೇಕ ಭಕ್ತರದೇಹಗಳು ಎದ್ದವು; |
| 7 | ಮತ್ತಾಯ | 27:53 | ಭಕ್ತರ ದೇಹಗಳು ಎದ್ದವು; ಮತ್ತು ಆತನು ಎದ್ದಮೇಲೆ ಸಮಾಧಿಯೊಳಗಿಂದ ~~ಹೊರಗೆ ಬಂದು~~ ಪರಿಶುದ್ಧ ಪಟ್ಟಣದೊಳಕ್ಕೆ ಹೋಗಿ ಅನೇಕರಿಗೆ ಕಾಣಿಸಿಕೊಂಡರು. |
| 8 | ಮತ್ತಾಯ | 28:19 | ~~ಆದ್ದರಿಂದ~~ ನೀವು ಹೊರಟುಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; |
| 9 | ಮಾರ್ಕ | 4:37 | ತರುವಾಯ ದೊಡ್ಡ ಬಿರುಗಾಳಿ ಎದ್ದು ತೆರೆಗಳು ಆ ದೋಣಿಗೆ ಬಡಿದು ಒಳಗೆ ನುಗ್ಗಿದ್ದರಿಂದ ~~ಆ ದೋಣಿ ಆಗಲೇ ತುಂಬುವದಕ್ಕೆ ಬಂದಿತ್ತು.~~ |
| 10 | ಮಾರ್ಕ | 10:30 | ಅವನಿಗೆ ಈಗಿನ ಕಾಲದಲ್ಲಿ ~~ಮನೆ, ಅಣ್ಣತಮ್ಮ, ಅಕ್ಕತಂಗಿ, ತಾಯಿ ಮಕ್ಕಳು, ಭೂಮಿ~~ ಇವೆಲ್ಲವೂ ಹಿಂಸೆಗಳು ಸಹಿತವಾಗಿ ನೂರರಷ್ಟು ಸಿಕ್ಕೇ ಸಿಕ್ಕುತ್ತವೆ; |
| 11 | ಮಾರ್ಕ | 14:30 | ನಿನಗೆ ಸತ್ಯವಾಗಿ ಹೇಳುತ್ತೇನೆ, ಈ ಹೊತ್ತು ಈ ರಾತ್ರಿಯಲ್ಲಿಯೇ ಕೋಳಿ ~~ಎರಡು ಸಾರಿ~~ ಕೂಗುವದಕ್ಕಿಂತ ಮುಂಚೆ ನೀನು ನನ್ನ ವಿಷಯದಲ್ಲಿ – ಅವನನ್ನು ಅರಿಯೆನೆಂಬುದಾಗಿ ಮೂರುಸಾರಿ ಹೇಳುವಿ ಎಂಬುದಾಗಿ ಹೇಳಿದನು. |
| 12 | ಮಾರ್ಕ | 14:71,72 | ನೀವು ಹೇಳುವ ಆ ಮನುಷ್ಯನನ್ನು ನಾನರಿಯೆನು ಎಂದು ಹೇಳಿ ಶಪಿಸಿಕೊಳ್ಳುವದಕ್ಕೂ ಆಣೆಯಿಡುವದಕ್ಕೂ ಪ್ರಾರಂಭಿಸಿದನು. ಕೂಡಲೆ ಕೋಳಿ ~~ಎರಡನೆಯ ಸಾರಿ~~ ಕೂಗಿತು. ಕೋಳಿ ~~ಎರಡು ಸಾರಿ~~ ಕೂಗುವದಕ್ಕಿಂತ ಮುಂಚೆ ಮೂರು ಸಾರಿ ನನ್ನ ವಿಷಯವಾಗಿ ಅವನನ್ನು ಅರಿಯೆನೆಂಬುದಾಗಿ ಹೇಳುವಿ ಎಂದು... |
| 13 | ಮಾರ್ಕ | 16:9-20 | ಪೂರ್ತಿ ವಚನ |

| | | | |
|---|---|---|---|
| 14 | ಲೂಕ | 16:16 | ಧರ್ಮಶಾಸ್ತ್ರವೂ ಪ್ರವಾದಿಗಳೂ ಯೋಹನನ ತನಕವೇ. ಈಚೆಗೆ ದೇವರ ರಾಜ್ಯವು ಸಾರಲ್ಪಡುತ್ತಾ ಇದೆ. ~~ಅದರಲ್ಲಿ ಸಕಲರೂ ಬಲಾತ್ಕಾರವಾಗಿ ನುಗ್ಗುತ್ತಾರೆ.~~ |
| 15 | ಲೂಕ | 17:12 | ಒಂದು ಹಳ್ಳಿಗೆ ಬಂದಾಗ ಹತ್ತುಮಂದಿ ಕುಷ್ಟರೋಗಿಗಳು ಆತನ ಎದುರಿಗೆ ಬಂದು ~~ದೂರದಲ್ಲಿ ನಿಂತು~~ – ಯೇಸುವೇ ಗುರುವೇ... |
| 16 | ಲೂಕ | 17:35 | ಇಬ್ಬರು ~~ಹೆಂಗಸರು~~ ಒಂದೇ ~~ಕಲ್ಲಿನಲ್ಲಿ~~ ಬೀಸುತ್ತಿರುವರು; ಒಬ್ಬ~~ಳು~~(ರು) ತೆಗೆದುಕೊಳ್ಳಲ್ಪಡುವ~~ಳು~~(ರು), ಮತ್ತೊಬ್ಬ~~ಳು~~(ರು) ಬಿಡಲ್ಪಡುವ~~ಳು~~(ರು) ಅಂದನು. |
| 17 | ಲೂಕ | 18:11 | ತನ್ನೊಳಗೆ |
| 18 | ಲೂಕ | 22:43,44 | ~~ಆಗ ಪರಲೋಕದಿಂದ ಒಬ್ಬ ದೇವದೂತನು...ಬೀಳುತ್ತಿರುವ ರಕ್ತದ ದೊಡ್ಡ ಹನಿಗಳೋಪಾದಿಯಲ್ಲಿತ್ತು.~~ |
| 19 | ಲೂಕ | 23:5 | ಯೂದಾಯ ಸೀಮೆಯಲ್ಲೆಲ್ಲಾ ಇವನು ~~ಬೋಧನೆಮಾಡುತ್ತಾ~~ ಜನರ ಮನಸ್ಸನ್ನು ಕದಲಿಸುತ್ತಾನೆ ಎಂದು ಇನ್ನೂ ಒತ್ತಿ ಹೇಳಿದರು. |
| 20 | ಲೂಕ | 23:34 | ಆಗ ಯೇಸು – ~~ತಂದೆಯೇ, ಅವರಿಗೆ ಕ್ಷಮಿಸು; ತಾವು ಏನು ಮಾಡುತ್ತೇವೆಂಬುದನ್ನು ಅರಿಯರು ಅಂದನು.~~ |
| 21 | ಯೋಹಾನ | 4:9 | ~~ಯೆಹೂದ್ಯರಿಗೂ ಸಮಾರ್ಯರಿಗೂ ಬಳಕೆಯಿಲ್ಲದಿರಲಾಗಿ~~ ಆ ಸಮಾರ್ಯದವಳು ಆತನಿಗೆ... |
| 22 | ಯೋಹಾನ | 5:25 | ~~ಅದು ಈಗಾಗಲೇ ಬಂದಿದೆ~~ |
| 23 | ಯೋಹಾನ | 8: 1-11 | ಪ್ರೂರ್ತಿ ವಚನ |
| 24 | ಯೋಹಾನ | 19:23 | ~~ಆತನ ಒಳಂಗಿಗಳನ್ನು ಸಹ ತಕ್ಕೊಂಡರು;~~ |
| 25 | ಯೋಹಾನ | 21:25 | ~~ಇದಲ್ಲದೆ ಯೇಸು ಮಾಡಿದ್ದು ಇನ್ನೂ ಬಹಳವಿದೆ; ಅದನ್ನೆಲ್ಲಾ ಒಂದೊಂದಾಗಿ ಬರೆಯುವದಾದರೆ ಬರೆಯಬೇಕಾದ ಪುಸ್ತಕಗಳನ್ನು ಲೋಕವೇ ಹಿಡಿಸದೆ ಹೋದೀತೆಂದು ನಾನು ನೆನೆಸುತ್ತೇನೆ.~~ |
| 26 | ಅ.ಕೃ | 15:32 | ಅನೇಕ ಮಾತುಗಳಿಂದ ಪ್ರಬೋಧಿಸಿ ~~ದೃಢ ಪಡಿಸಿ~~ದರು. |
| 27 | ರೋಮ | 8:26 | ಪವಿತ್ರಾತ್ಮನು ತಾನೇ ಮಾತಿಲ್ಲದಂಥ ನರಳಾಟದಿಂದ ~~ನಮಗೋಸ್ಕರ~~ ಬೇಡಿಕೊಳ್ಳುತ್ತಾನೆ. |
| 28 | 1ಕೊರಿ | 2:1 | ಸಹೋದರರೇ, ನಾನಂತೂ ದೇವರು ಹೇಳಿಕೊಟ್ಟ ~~ಮಾತನ್ನು~~ (ರಹಸ್ಯವನ್ನು) ತಿಳಿಸುವವನಾಗಿ ನಿಮ್ಮ ಬಳಿಗೆ ಬಂದಾಗ |
| 29 | ಎಫೆಸ | 2:9 | ~~ಆ ಅಧರ್ಮಸ್ವರೂಪನ~~ (ಆತನ) ಪ್ರತ್ಯಕ್ಷತೆಯು ಸೈತಾನನ ಮಾಟಕ್ಕನುಗುಣವಾಗಿರುವುದು. |
| 30 | ೨ ತಿಮೋ | 3:3 | ~~ಮಮತೆಯಿಲ್ಲದವರೂ~~ |
| 31 | ಇಬ್ರಿ | 12:18 | ನೀವು ಮುಟ್ಟುವುದಕ್ಕೆ ಸಾಧ್ಯವಾದಂಥ ಮತ್ತು ~~ಬೆಂಕಿಹತ್ತಿದಂಥ ಬೆಟ್ಟಕ್ಕೂ~~ ಉರಿಯುವ ಬೆಂಕಿಗೂ ಮೋಡದ ಮೊಬ್ಬಿಗೂ |
| 32 | ೧ ಪೇತ್ರ | 2:5 | ಸಮರ್ಪಕವಾದ ~~ಆತ್ಮೀಯ~~ ಯಜ್ಞಗಳನ್ನು ಸಮರ್ಪಿಸುವದಕ್ಕೆ |
| 33 | ೨ ಪೇತ್ರ | 1:1 | ಯೇಸುಕ್ರಿಸ್ತನ ದಾಸನೂ ಅಪೋಸ್ತಲನೂ ಆಗಿರುವ ಸಿಮೆಯೋನ ಪೇತ್ರನು ನಮ್ಮ ~~ದೇವರ~~ (ಕರ್ತನು) ಮತ್ತು ರಕ್ಷಕನಾದ ಯೇಸುಕ್ರಿಸ್ತ |
| 34 | ಪ್ರಕಟನೆ | 1:17 | ಆತನು ಬಲಗೈಯನ್ನು ನನ್ನ ಮೇಲಿಟ್ಟು – ~~ಹೆದರಬೇಡ,~~ ನಾನು ಮೊದಲನೆಯವನೂ |
| 35 | ಪ್ರಕಟನೆ | 5:3 | ಭೂಮಿಯಲ್ಲಾಗಲಿ ~~ಭೂಮಿಯ ಕೆಳಗಾಗಲಿ~~ ಯಾವನಿಗೂ ಶಕ್ತಿಯಿರಲಿಲ್ಲ. |
| 36 | ಪ್ರಕಟನೆ | 5:13 | ಭೂಮಿಯ ಮೇಲೆಯೂ ~~ಭೂಮಿಯ ಕೆಳಗೆಯೂ~~ ಸಮುದ್ರದ ಮೇಲೆ |
| 37 | ಪ್ರಕಟನೆ | 6:2 | ಜಯಿಸುತ್ತಿರುವವನಾಗಿ ~~ಜಯಿಸುವದಕ್ಕೋಸ್ಕರ~~(ಜಯಿಸಿ) ಹೊರಟನು. |
| 38 | ಪ್ರಕಟನೆ | 9:13 | ದೇವರ ಸಮ್ಮುಖದಲ್ಲಿರುವ ಚಿನ್ನದ ~~ವೇದಿಯ ಕೊಂಬುಗಳಿಂದ~~ (ವೇದಿಯಿಂದ) ಹೊರಟ ಒಂದೇ ಧ್ವನಿಯನ್ನು ಕೇಳಿದೆನು. |
| 39 | ಪ್ರಕಟನೆ | 10:6 | ಭೂಮಿಯನ್ನೂ ಅದರಲ್ಲಿರುವ ಸಮಸ್ತವನ್ನೂ ~~ಸಮುದ್ರವನ್ನೂ ಅದರಲ್ಲಿರುವ ಸಮಸ್ತವನ್ನೂ~~ ಸೃಷ್ಟಿಸಿ |
| 40 | ಪ್ರಕಟನೆ | 16:11 | ನಾಲಿಗೆಗಳನ್ನು ಕಚ್ಚಿಕೊಂಡು ~~ತಮ್ಮ ಕೃತ್ಯಗಳ ವಿಷಯದಲ್ಲಿ~~ ಮಾನಸಾಂತರಗೊಳ್ಳದೆ ತಮ್ಮ ಕಷ್ಟಗಳ ದೆಸೆಯಿಂದ~~ಲೂ~~ ~~ಹುಣ್ಣುಗಳ ದೆಸೆಯಿಂದಲೂ~~ ಪರಲೋಕ ದೇವರನ್ನು ದೂಷಿಸಿದರು. |
| 41 | ಪ್ರಕಟನೆ | 16:17 | ವಾಯುಮಂಡಲದ ಮೇಲೆ ಹೊಯ್ಯಲು ದೇವಾಲಯದ~~ಲ್ಲಿರುವ ಸಿಂಹಾಸನದ~~ ಕಡೆಯಿಂದ ಮಹಾ ಶಬ್ದವು ಉಚಿಟಾಗಿ |
| 42 | ಪ್ರಕಟನೆ | 18:22 | ~~ಬೀಸುವ ಕಲ್ಲಿನ ಶಬ್ದವು ನಿನ್ನಲ್ಲಿ ಇನ್ನೆಂದಿಗೂ ಕೇಳಿಸುವುದಿಲ್ಲ.~~ |
| 43 | ಪ್ರಕಟನೆ | 20:5 | ~~ಮಿಕ್ಕ ಸತ್ತವರು ಆ ಸಾವಿರ ವರುಷ ತೀರುವ ತನಕ ಜೀವಿತರಾಗಿ ಏಳಲಿಲ್ಲ.~~ ಇದೇ ಪ್ರಥಮ ಪುನರುತ್ಥಾನವು. |
| 44 | ಪ್ರಕಟನೆ | 21:26 | ರಾತ್ರಿಯಂತೂ ಅಲ್ಲಿಲ್ಲ. ಜನಾಂಗಗಳ ವೈಭವವು ~~ಘನವೂ~~ ಅಲ್ಲಿಗೆ ಬರುವವು. |



## ಕೃತಜ್ಞತೆಗಳು

For all your enquiries or questions please contact us on 8867768876

**Jesus Gospel Ministry**